## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**ECA** – 20/2025 **PW**–1

**ದಿಃ24.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಾದ ಶ್ರೀಮತಿ ಜೆ.ಎನ್ ಆರ ರವರಿಂದ**

ನಾನು ಚಾಲಕನಾಗಿ ಕೆಲಸ ಮಾಡುತ್ತೇನೆ. ಚಾಲಕನ ಕೆಲಸವನ್ನು ಈಗ ಮಾಡುತ್ತಿಲ್ಲ. ನಿಮ್ಮ ಡಿಎಲ್ ನ್ನು ಆರಟಿಓರವರಿಗೆ ನನಗೆ ಚಾಲಕನ ಕೆಲಸ ಮಾಡಲು ಆಗುತ್ತಿಲ್ಲ ಎಂದು ಸರೆಂಡರ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು 1 ನೇ ಎದುರುದಾರರ ಕಡೆ ಕೆಲಸ ಮಾಡುತ್ತೇನೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನೇದರೂ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಅವರ ಬಳಿ ಯಾವುದೇ ಕೆಲಸ ಮಾಡದಿದ್ದರು ಕೇವಲ ಪರಿಹಾರ ಪಡೆಯಬೇಕೆಂದು ಈ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ತಿಂಗಳಿಗೆ 20 ಸಾವಿರ ರೂಪಾಯಿ ಸಂಬಳ ಹಾಗೂ 200 ರೂ ಭತ್ಯೆ ಕೊಡುತ್ತಿದ್ದರು ಎಂದು ಹೇಳಿದ್ದು ಹೇಗೆ ಕೊಡುತ್ತಿದ್ದರು ಎಂದರೆ ಸಾಕ್ಷಿ ನಗದಾಗಿ ಕೊಡುತ್ತಿದ್ದರು ಎನ್ನುತ್ತಾರೆ. ಸದರಿಯವರು ನಗದಾಗಿ ಹಣ ಕೊಟ್ಟರೆ ನನ್ನ ಬಳಿ Received ಎಂದು ಸಹಿ ಮಾಡಿಸಿಕೊಳ್ಳುತ್ತಿದ್ದರು ಎಂದರೆ ಇಲ್ಲ ಹಾಗೆಯೇ ಕೊಡುತ್ತಿದ್ದರು ಎನ್ನುತ್ತಾರೆ. ಸದರಿ 1 ನೇ ಎದುರುದಾರರು Tours and Travels ಆಗಿದ್ದು ಸದರಿಯವರು ನನಗೆ ಹಾಗೆಯೆ ಹಣ ಕೊಡುತ್ತಿರಲಿಲ್ಲ ಅದಕ್ಕೆ ತಕ್ಕಂತೆ ಅವರು ರಜಿಸ್ಟರ ಮೆಂಟನ್ ಮಾಡುತ್ತಿದ್ದರು ಎಂದರೆ ಸಾಕ್ಷಿ ಮಾಡುತ್ತಿದ್ದರು ಆದರೆ ನನಗೆ ಕೆಲಸಕ್ಕೆ ಹೋದಾಗ ಹಣ ಕೊಡುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ರಜಿಸ್ಟರ ಹಾಜರುಪಡಿಸಲು ತೊಂದರೆ ಇದೇಯಾ ಎಂದರೆ ಸಾಕ್ಷಿ ನನ್ನ ಕಡೆಯಿಂದ ಯಾವುದೇ ಸಹಿ ಪಡೆಯುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಟ್ರಕನ್ನು ತೆಗೆದುಕೊಂಡು ಹೋದಾಗ ಅದಕ್ಕೆ ಒಂದು ವೇ ಬಿಲ್ ಮಾಡುತ್ತಾರೆಂದರೆ ಸರಿ. ಸದರಿ ವೇ ಬಿಲ್ ನ್ನು ಹಾಜರುಪಡಿಸಲು ತೊಂದರೆ

ಇದೇಯಾ ಎಂದರೆ ಸಾಕ್ಷಿ ಕೇಳಬೇಕು ಎನ್ನುತ್ತಾರೆ. ನಾನು ಗಾಡಿ ತೆಗೆದುಕೊಂಡು ಹೋಗಿಯೆ ಇಲ್ಲ ನಾನೇ ಅಪಘಾತಪಡಿಸಿಕೊಂಡು ಪರಿಹಾರ ಪಡೆಯುವ ಉದ್ದೇಶದಿಂದ ಈ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಆ ದಿನ ನಾನು ಚಿತ್ರದುರ್ಗದಿಂದ ಬೆಂಗಳೂರಿಗೆ ಹೋಗುವಾಗ ಸದರಿ ಲಾರಿಯಲ್ಲಿ ಮಸ್ಸರೂಮ್ ಲೋಡ ಇತ್ತು, ನಮ್ಮ ಗಾಡಿಯಲ್ಲಿ ಮತ್ತೊಬ್ಬ ಕ್ಲಿನರ್ ಅಲಿಯಾಸ ಎಂಬುವವರು ಇದ್ದರು. ಅಪಘಾತವಾದ ನಂತರ ಕ್ಲಿನರ್ ದೂರು ನೀಡಿರುತ್ತಾರೆ. ಪೋಲಿಸರು ನಾನೇ ನನ್ನ ವಾಹನವನ್ನು ಜೋರಾಗಿ ಓಡಿಸಿ ಅಪಘಾತಪಡಿಸಿರುತ್ತೇನೆಂದು ನನ್ನ ಮೇಲೆ ಅಂತಿಮ ವರದಿ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಅದು ತಪ್ಪು ಇದೆ ಎನ್ನುತ್ತಾರೆ. ಪೋಲೀಸರ ಅಂತಿಮ ವರದಿಯನ್ನು ಏಲ್ಲಿಯಾದರು ತಪ್ಪು ಎಂದು ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿಲ್ಲ ಎನ್ನುತ್ತಾರೆ.

ದಿಃ04-12-2024 ರಿಂದ ದಿಃ05-12-2024 ಹಿರಿಯೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಕಿಮ್ಸಗೆ ದಾಖಲಾಗಿದ್ದು ದಿಃ17-12-2024 ರವರೆಗೆ ಚಿಕಿತ್ಸೆ ಪಡೆದಿದ್ದೇನೆಂದು ಹೇಳಿದ್ದು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲವೆಂದರೆ ಸಾಕ್ಷಿ ಹಾಕಿದ್ದೇನೆ ಎನ್ನುತ್ತಾರೆ. ನಾನು ಕಿಮ್ಸನ ಗಾಯದ ಪ್ರಮಾಣ ಪತ್ರ ಬಿಟ್ಟರೆ ಬೇರೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲವೆಂದರೆ ಸಾಕ್ಷಿ ಕೊಟ್ಟಿದ್ದೇನೆ ಎನ್ನುತ್ತಾರೆ. ಯಾವುದೋ ಒಂದು ಆಸ್ಪತ್ರೆಗೆ ಭೇಟಿ ಕೊಟ್ಟರೆ ಮೊದಲು ಅಪಘಾತದ ಸಂಬಂಧ ಎಂ.ಎಲ್.ಸಿ ಹಾಗೂ ಚೀಟಿ ಮಾಡುತ್ತಾರೆಂದರೆ ಸಾಕ್ಷಿ ಹೌದು ಕೊಟ್ಟಿರುತ್ತೇನೆ ಎನ್ನುತ್ತಾರೆ. ನಾನು ಸದರಿ ಅಪಘಾತದಿಂದ ತೊಂದರೆ ಅನುಭವಿಸುತ್ತಿದ್ದು ಈಗಲೂ ಕೂಡಾ ಚಿಕಿತ್ಸೆ ಪಡೆಯುತ್ತಿದ್ದೇನೆಂದು ಹೇಳಿದ್ದು ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಚಿಕಿತ್ಸೆ ಪಡೆಯುತ್ತಿದ್ದೇನೆ ಎನ್ನುತ್ತಾರೆ. ನಾನು 1 ನೇ ಎದುರುದಾರರ ಬಳಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ಅವರು ನನಗೆ 20 ಸಾವಿರ ರೂಪಾಯಿ ಪಗಾರ ಕೊಡುತ್ತಿರಲಿಲ್ಲ ಆದರು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ